**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ವಿರಾಜಪೇಟೆ**

**ಓ.ಎಸ್. ಸಂಖ್ಯೆ : *56/2020***

**ಪಿಡಬ್ಲ್ಯೂ- *1* ನಸೀರಾ ಪಿ ಎಂ**

**ದಿನಾಂಕ : *31-07-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು : ಶ್ರೀ. ಎನ್ ಹೆಚ್ ಎಫ್ ಪ್ರತಿವಾದಿ ಪರ ವಕೀಲರಿಂದ :**

ನಾನು ದಿನಾಂಕ 09-07-2020 ರಂದು ಕಡೆಯದಾಗಿ ಪ್ರತಿವಾದಿಯ ಮನೆಯನ್ನು ಬಿಟ್ಟು ಬಂದಿರುತ್ತೇನೆ. ನಾನು ಅವರ ಮನೆಯಿಂದ ಬಸ್ ನಿಲ್ದಾಣದವರೆಗೆ ಓಡಿಕೊಂಡು ಬಂದು ನಂತರ ಅಲ್ಲಿಂದ ಬಸ್‌ನಲ್ಲಿ ಬಂದಿರುತ್ತೇನೆ. ನಾನು ಸದರಿ ದಿನದಂದು ಒಬ್ಬಳೇ ಬಂದಿರುತ್ತೇನೆ. ನಾನು ಸದರಿ ದಿನದಂದು ನನಗೆ ಸಂಬಂಧಿಸಿದ ಯಾವುದೇ ವಸ್ತುಗಳನ್ನು ತೆಗೆದುಕೊಂಡು ಬಂದಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಧರಿಸಿದ್ದ ಬಟ್ಟೆಯಲ್ಲಿಯೇ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಸಂಬಂಧಿಸಿದ 280 ಗ್ರಾಂ ಚಿನ್ನ, ಲ್ಯಾಪ್ ಟಾಪ್, ನನ್ನ ಬಟ್ಟೆ, ಫೋಟೋ ಇರುವ ಆಲ್ ಬಂಮ್, ನನ್ನ ದಾಖಲೆಗಳು ಹಾಗೂ ಪಾಸ್ ಪೋರ್ಟ್ ಹಾಗೂ ನನಗೆ ಸೇರಿದ ಎಲ್ಲಾ ವಸ್ತುಗಳನ್ನು ಅಲ್ಲಿಯೇ ಬಿಟ್ಟು ಬಂದಿರುತ್ತೇನೆ. ಆ ನಂತರ ನಾನು ಪೋಲಿಸರ ಜೊತೆಯಲ್ಲಿ ಒಂದು ಬಾರಿ ಪ್ರತಿವಾದಿಯ ಮನೆಗೆ ಹೋಗಿರುತ್ತೇನೆ. ಪ್ರತಿವಾದಿಯ ಮನೆಯಲ್ಲಿ ನನಗೂ ಹಾಗೂ ಪ್ರತಿವಾದಿಗೂ ಒಂದು ಪ್ರತ್ಯೇಕ ರೂಂ ಇದ್ದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮನೆಯಲ್ಲೆ ನಾವು ಗಂಡ ಹೆಂಡತಿ ಇರಲು ಒಂದು ರೂಂ ಇರುತ್ತದೆ ಅಷ್ಟೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಮನೆಯಲ್ಲಿ ಮೂರು ಬೆಡ್ ರೂಂ, ಒಂದು ಹಾಲ್, ಒಂದು ಡೈನಿಂಗ್ ಹಾಲ್, ಕಿಚನ್, ಸ್ಟೋರ್ ರೂಂ ಹಾಗೂ ಸಿಟ್ ಔಟ್ ಹಾಗೂ ಕಿಚನ್ ನ ಪಕ್ಕಕ್ಕೆ ಒಂದು ಹಾಲ್ ರೀತಿಯ ದೊಡ್ಡದಾದ ಕೋಣೆ ಇರುತ್ತದೆ. ನಾನು ಪ್ರತಿವಾದಿಯ ಮನೆಯಿಂದ ಹೋಗುವ ಮೊದಲು ನನ್ನ ತಂದೆ ತಾಯಿಗಳಿಗೆ ಆ ವಿಚಾರವನ್ನು ಹೇಳದೇ ಬಂದಿರುತ್ತೇನೆ. ಸಾಕ್ಷಿ ಮುಂದುವರೆದು ನಾನು ಮನೆಯಿಂದ ಓಡಿಕೊಂಡು ಬಂದಿರುತ್ತೇನೆ

ಎಂದು ನುಡಿಯುತ್ತಾರೆ. ನಾನು ಸದರಿ ದಿನದಂದು ಬರುವಾಗ ನಾನು ಹಾಗೂ ಪ್ರತಿವಾದಿ ಇರುತ್ತಿದ್ದ ಕೋಣೆಯನ್ನು ಲಾಕ್ ಮಾಡಿ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಜೊತೆ ಹೋಗುವಾಗ ನನ್ನ ಜೊತೆ ನನ್ನ ತಂದೆ, ತಾಯಿ ಹಾಗೂ ನನ್ನ ತಂದೆಯ ಒಬ್ಬರು ಸ್ನೇಹಿತರು ಬಂದಿದ್ದರು. ನಾನು ಪೋಲಿಸರ ಜೊತೆ ಯಾವಾಗ ಪ್ರತಿವಾದಿಯ ಮನೆಗೆ ಹೋಗಿರುತ್ತೇನೆಂದು ನನಗೆ ಸರಿಯಾಗಿ ನೆನಪಿರುವುದಿಲ್ಲ. ನಾನು ಆ ರೀತಿ ಕೋಣೆಗೆ ಹೋದಾಗ ಪೋಲಿಸರು ವೀಡಿಯೋ ಮಾಡಿರುತ್ತಾರೆ. ಸಾಕ್ಷಿ ಮುಂದುವರೆದು ಅವರು ಪೂರ್ಣ ವೀಡಿಯೋವನ್ನು ತೆಗೆದಿರುವುದಿಲ್ಲ, ಬದಲಾಗಿ ನಾನು ದಾಖಲಾತಿಗಳನ್ನು ತೆಗೆಯುವ ಸಲುವಾಗಿ ಮೇಲಕ್ಕೆ ಹತ್ತಿದ್ದ ವೀಡಿಯೋವನ್ನು ಮಾತ್ರ ತೆಗೆದಿರುತ್ತಾರೆ, ಪೂರ್ಣ ವೀಡಿಯೋವನ್ನು ತೆಗೆದಿರುವುದಿಲ್ಲವೆಂದು ನುಡಿಯುತ್ತಾರೆ. ನಾನು ಪೋಲಿಸರಿಗೆ ದೂರನ್ನು ನೀಡಿದ ನಂತರ ನಾನು ಪೋಲಿಸರೊಂದಿಗೆ ಪ್ರತಿವಾದಿಯ ಮನೆಗೆ ಹೋಗಿರುತ್ತೇನೆ. ಸದರಿ ದೂರಿನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ಪೋಲಿಸರು ನನ್ನ ದೂರನ್ನು ಸ್ವೀಕರಿಸಿ, ಪ್ರಕರಣ ದಾಖಲಿಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪೋಲಿಸರ ಜೊತೆ ಪ್ರತಿವಾದಿಯ ಮನೆಗೆ ಹೋದ ಸಮಯದಲ್ಲಿ ನನಗೆ ಸೇರಿದ ಎಲ್ಲಾ ವಸ್ತುಗಳನ್ನು ಅಲ್ಲಿಂದ ತಂದಿರುತ್ತೇನೆ ಎಂದರೆ ಸರಿಯಲ್ಲ. ವೀಡಿಯೋವನ್ನು ತೆಗೆಯುವ ಬಗ್ಗೆ ನಾನು ಪೋಲಿಸರಿಗೆ ತಿಳಿಸಿರುತ್ತೇನೆ. ಆ ರೀತಿ ಪೋಲಿಸರು ವೀಡಿಯೋ ಮಾಡಿದ ಮೇಲೆ ಅದರ ಸಿಡಿಯಾಗಲಿ, ಫೋಟೋವನ್ನಾಗಲಿ ಪೋಲಿಸರು ನನಗೆ ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಆ ಬಗ್ಗೆ ಪೋಲಿಸರನ್ನು ವಿಚಾರಿಸಲು ಕರೆ ಮಾಡಿದಾಗ ಅವರಲ್ಲಿ ಕೆಲವರು ವರ್ಗಾವಣೆಯಾಗಿದ್ದು, ವೀಡಿಯೋ ಇರುವುದಿಲ್ಲವೆಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪೋಲಿಸರಿಗೆ ನೀಡಿದ ದೂರಿನ ಮೇಲೆ ಪೋಲಿಸರು ಪ್ರಕರಣ ದಾಖಲಿಸಿರುತ್ತಾರೋ

ಇಲ್ಲವೋ ಎಂದು ನಾನು ನಂತರ ಪರಿಶೀಲಿಸಿರುವುದಿಲ್ಲ. ನನಗೆ ಇಂಗ್ಲಿಷ್ ಭಾಷೆ ಓದಲು ಬರೆಯಲು ಬರುತ್ತದೆ. ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ಸಹಿಗಳು ನನ್ನದೆ ಆಗಿರುತ್ತದೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ನಾನು ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ಸತ್ಯವಾಗಿದೆಯೋ ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಪ್ರಮಾಣ ಪತ್ರ ಪ್ಯಾರಾ ನಂ. 9 ರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಿದ್ದು, ಆದರೆ ನನ್ನನ್ನು ಪ್ರತಿವಾದಿ ಹಾಗೂ ಅವರ ಮನೆಯವರು ಕರೆದುಕೊಂಡು ಬಂದಿರುತ್ತಾರೆ ಎನ್ನುವ ವಿಚಾರ ತಪ್ಪಾಗಿರುತ್ತದೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.